# ಡಾ. ಎಸ್. ಆರ್. ರಂಗನಾಥನ್

**(1892 - 1972)**

ಭಾರತ ಸರ್ಕಾರವು ಮಾರ್ಚ್ 1965ರಲ್ಲಿ ಶಿಯಾಳಿ ರಾಮಾಮೃತ ರಂಗನಾಥನ್‌ರವರನ್ನು ಗ್ರಂಥಾಲಯ ವಿಜ್ಞಾನದಲ್ಲಿ ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರಾಗಿ ಗೌರವಿಸಿತು. ಈ ಹಿಂದೆ, 1948ರಲ್ಲಿ ದೆಹಲಿ ವಿಶ್ವವಿದ್ಯಾನಿಲಯವು ಡಿ.ಲಿಟ್ ಪದವಿ, 1964ರಲ್ಲಿ ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯವು ಗ್ರಂಥಾಲಯ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ, 1956ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿ ಮತ್ತು 1971ರಲ್ಲಿ ಅಮೆರಿಕ ಗ್ರಂಥಾಲಯ ಸಂಸ್ಥೆಯವತಿಯಿಂದ ಮಾರ್ಗರೆಟ್ ಮನ್ ಪ್ರಶಸ್ತಿಗಳು ದೊರೆತಿದ್ದವು. ಈ ಎಲ್ಲಾ ಮನ್ನಣೆಗಳೂ ಅವರು ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಮಹತ್ತರವಾದ ಕೊಡುಗೆಗಳಿಗಾಗಿ ದೊರೆತ ಗೌರವಗಳು. ಇವರು ಆಗಸ್ಟ್ 9, 1892ರಂದು ಜನಿಸಿದರು ಮತ್ತು ಗಣಿತದಲ್ಲಿ ಎಂ.ಎ ಪದವಿಯನ್ನು ಪ್ರೊ. ಎಡ್ವರ್ಡ್ ಬಿ. ರಾಸ್‌ರವರ ಮಾರ್ಗದರ್ಶನದಲ್ಲಿ ಪಡೆದರು. ಇವರು ಮದ್ರಾಸ್ ವಿಶ್ವವಿದ್ಯಾನಿಲಯದ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಗಣಿತವನ್ನು ಬೋಧಿಸಿದ್ದಾರೆ. ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರಪ್ರಥಮ ಗ್ರಂಥಪಾಲಕರಾಗಿ 1924ರಲ್ಲಿ ನೇಮಕಗೊಂಡು, 20 ವರ್ಷಗಳ ತನಕ ಆ ಹುದ್ದೆಯನ್ನು ನಿರ್ವಹಿಸಿ ನಂತರ ಗ್ರಂಥಾಲಯ ವಿಜ್ಞಾನದ ಗೌರವ ಪ್ರಾಧ್ಯಾಪಕರಾಗಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ (1944-47), ದೆಹಲಿ ವಿಶ್ವವಿದ್ಯಾನಿಲಯ (1947-56) ಮತ್ತು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ, ಬೆಂಗಳೂರು (1962-72) ಮುಂತಾದ ಕಡೆಗಳಲ್ಲಿ ಕಾರ್ಯ ನಿರ್ವಹಿಸಿದರು. ಇವರು ಸ್ಥಾಪಿಸಿದ ಮಾಹಿತಿ ಸಂಸ್ಥೆಗಳೆಂದರೆ, INSDOC,ದೆಹಲಿ, ಭಾರತೀಯ ಮಾನಕ ಸಂಸ್ಥೆಯ ಪ್ರಲೇಖನ ವಿಭಾಗೀಯ ಸಮಿತಿ, ನವದೆಹಲಿ ಮತ್ತು ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ (DRTC), ಬೆಂಗಳೂರು. ತಮ್ಮ ಜೀವಿತಾವಧಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಸಂಶೋಧನಾ ಲೇಖನಗಳು, ಸುಮಾರು 60 ಪುಸ್ತಕಗಳು ಮತ್ತು 5 ನಿಯತಕಾಲಿಕೆಗಳನ್ನು ಸಂಪಾದಿಸಿ ಹೊರತಂದಿದ್ದಾರೆ. ಇವರು ಗ್ರಂಥಾಲಯ ವಿಜ್ಞಾನಕ್ಕಾಗಿ ಐದು ಸೂತ್ರಗಳನ್ನು ಪ್ರತಿಪಾದಿಸಿದರು. ತಮ್ಮ ನಿರಂತರ ಸಂಶೋಧನೆಯ ಆಧಾರದ ಮೇಲೆ ಇವರು ದ್ವಿಬಿಂದು ವರ್ಗೀಕರಣ, ವರ್ಗೀಕೃತ ಸೂಚಿ ಸಂಹಿತೆ, ಗ್ರಂಥಾಲಯ ಆಡಳಿತ, ಪ್ರಲೇಖನ ಮತ್ತು ಅದರ ಉಪವರ್ಗಗಳು, ಮುಂತಾದ ಗ್ರಂಥಗಳನ್ನು ಹೊರತಂದರು. ಇವರು ಸೆಪ್ಟಂಬರ್ 27, 1972ರಂದು ನಿಧನರಾದರು. ಈಗಲೂ ಕೂಡ ಅವರನ್ನು ಭಾರತದ ಗ್ರಂಥಾಲಯ ಪಿತಾಮಹ ಎಂದೇ ಗುರುತಿಸಲಾಗುತ್ತದೆ. ಇವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಅಳಿಸಲಾಗದ ಹೆಜ್ಜೆಗುರುತುಗಳನ್ನು ಬಿಟ್ಟು ಹೋಗಿದ್ದಾರೆ.